**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ 580/2024**

| | |
|---|---|
| ಫಿರ್ಯಾದಿಃ | ಸರಕಾರದ ಪರವಾಗಿ<br>ಪೋಲಿಸ್ ಉಪ-ನಿರೀಕ್ಷಕರು,<br>ಹೊನ್ನಾವರ ಪೋಲಿಸ್ ಠಾಣೆ , ಹೊನ್ನಾವರ. |
| | **-ವಿರುದ್ಧ-** |
| ಆರೋಪಿಃ | ಉದಯ ನಾರಾಯಣ ನಾಯ್ಕ<br>ವಯಸ್ಸುಃ 40 ವರ್ಷಗಳು,<br>ಉದ್ಯೋಗಃ ಕೃಷಿ,<br>ಸಾಕೀನಃ ಹಿರೇಬೈಲ್, ಬಟ್ಲಗದ್ದೆ,<br>ತಾಲೂಕುಃ ಹೊನ್ನಾವರ. |

**ದೋಷಾರೋಪಣೆ**

ಶ್ರೀ ಚಂದ್ರಶೇಖರ್ ಬಿ.ಸಿ, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನ ಹೊರೆಸುತ್ತಿದ್ದೇನೆ.

1.ಮೊದಲನೇಯದಾಗಿ, ಪಿರ್ಯಾದಿ ಹಾಗೂ ಆರೋಪಿ ಗಂಡ ಹೆಂಡತಿಯರಿದ್ದು ಇಬ್ಬರೂ ಪರಸ್ಪರ ಪ್ರೀತಿಸಿ ದಿನಾಂಕ 06-09-2014 ರಂದು ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಮದುವೆಯಾಗಿದ್ದು ಇಬ್ಬರ ದಾಂಪತ್ಯ ಜೀವನದಲ್ಲಿ 2 ಮಕ್ಕಳು ಜನಿಸಿದ್ದು ಮದುವೆಯಾದ ಹೊಸತರಲ್ಲಿ ಆರೋಪಿಯಾದ ನೀನು ಪಿರ್ಯಾದಿಗೆ ಚೆನ್ನಾಗಿ ನೋಡಿಕೊಂಡಿದ್ದು ತದನಂತರದಲ್ಲಿ ಆಕೆಯ ನಡತೆಯ ಬಗ್ಗೆ ಅನುಮಾನ ಮಾಡಿ ಯಾರೇ ಫೋನ್ ಕರೆ ಮಾಡಿದರೂ ಅವರೊಂದಿಗೆ ಸಂಬಂಧ ಕಲ್ಪಿಸಿ ಆಕೆಗೆ ಅವಾಚ್ಯ ಶಬ್ದಗಳಿಂದ ಬೈದು, ದೈಹಿಕವಾಗಿ ಹಲ್ಲೆ ಮಾಡುತ್ತಿದ್ದು, ದಿನಾಂಕಃ 11-08-2024 ರಂದು ಸಂಜೆ 06-30 ರ ಸಮಯದಲ್ಲಿ ಹಿರೇಬೈಲ್ ಗ್ರಾಮದ ಬಟ್ಲಗದ್ದೆಯಲ್ಲಿರುವ ಮನೆಯಲ್ಲಿ ಆರೋಪಿಯು ಪುನಃ ಆಕೆಯ ನಡತೆಯ ಬಗ್ಗೆ ಅನುಮಾನ ಮಾಡಿ ಆಕೆಯ ಮೇಲೆ ದೈಹಿಕವಾಗಿ ಹಲ್ಲೆ ಮಾಡಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡಿ ಈ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 85 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

2.ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯು ಚಾಸಾ-1 ರವರಿಗೆ ಕೈಯಿಂದ ಹಲ್ಲೆ ಮಾಡಿ ಸಾದಾ ಸ್ವರೂಪದ ನೋವುಂಟು ಮಾಡಿ ಈ ಮೂಲಕ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 115(2) ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

3.ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಪಿರ್ಯಾದಿಗೆ ಕೈಯಿಂದ ಹಲ್ಲೆ ಮಾಡಿ ಮನೆಯಲ್ಲಿದ್ದ ಹಗ್ಗದಿಂದ ಕುತ್ತಿಗೆ ಕಾಲು ಮತ್ತು ಮೈಮೇಲೆ ಹೊಡೆದು ಸಾದಾ ಸ್ವರೂಪದ ನೋವುಂಟು ಮಾಡಿ ಭಾರತೀಯ ನ್ಯಾಯ ಸಂಹಿತೆ ಕಲಂ 118(1) ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

4.ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಚಾಸಾ-1ರವರಿಗೆ ರಂಡೆ ಬೇವರ್ಸಿ ನೀನು ಬೇರೆಯವರೊಂದಿಗೆ ಮಾತನಾಡುತ್ತೀಯಾ ಎಂದು ಹೇಳಿ ಆಕೆಯ ಸಾರ್ವಜನಿಕ ನೆಮ್ಮದಿಗೆ ಭಂಗ ಬರುವಂತೆ ಅವಾಚ್ಯ ಶಬ್ದಗಳಿಂದ ಬೈದು ಭಾರತೀಯ ನ್ಯಾಯ ಸಂಹಿತೆ ಕಲಂ 355 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

7. ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಚಾಸಾ-1ರವರಿಗೆ ನೀನು ಇಲ್ಲಿ ಇರುವುದು ಬೇಗ ಹೋಗು ಇಲ್ಲವಾದಲ್ಲಿ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ಪಿರ್ಯಾದಿಗೆ ಜೀವ ಬೆದರಿಕೆ ಹಾಕಿ ಈ ಮೂಲಕ ಆರೋಪಿತರು ಭಾರತೀಯ ನ್ಯಾಯ ಸಂಹಿತೆ ಕಲಂ 351(3) ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎನ್ನುವ ದೋಷಾರೋಪಣೆಯನ್ನ ಹೊರಿಸುತ್ತಿದ್ದೇನೆ.

ಮೇಲಿನ ಆಪಾದನೆಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತಿದ್ದೇನೆ.

Sd/-

ದಿನಾಂಕಃ 06-06-2025.

ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್)**

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**